**ಸಾಕ್ಷಿಯನ್ನು ದಿನಾಂಕ 10.12.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದರುದಾರರ ಪರ ಶ್ರೀ.ಹೆಚ್.ಎಸ್.ಬಿ. ವಕೀಲರಿಂದಃ**

ನನ್ನ ಮಗ ತೀರಿಕೊಂಡಾಗ ಆತನಿಗೆ 25 ವರ್ಷ ವಯಸ್ಸಾಗಿತ್ತು. ಆತ ದ್ವಿತೀಯ ವರ್ಷದ ಪದವಿಯನ್ನು ಕಲಿಯುತ್ತಿದ್ದ. ನನ್ನ ಮಗ ದ್ವಿತೀಯ ವರ್ಷದ ಪದವಿಯನ್ನು ಕಲಿಯುತ್ತಿದ್ದ ಬಗ್ಗೆ ಯಾವುದೇ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ. ನಾನು ಮೃತ ಮನೋಜ್ ಕುಮಾರ್ ರವರ ತಾಯಿ ಎಂದು ತೋರಿಸಲು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇದ್ದರೆ ದಾಖಲೆಯನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

2. ನಿಪಿ8 ದಾಖಲೆಯಲ್ಲಿ ತೋರಿಸಿರುವ HINDSIAM BEVS PRIVATE LIMITED ಎಂಬ ಯಾವುದೇ ಕಂಪನಿ ಅಸ್ತಿತ್ವದಲ್ಲಿ ಇರಲಿಲ್ಲ ಮತ್ತು ಇಲ್ಲ ಎಂದರೆ ಸರಿಯಲ್ಲ. ಮೃತ ಮನೋಜ್ ಕುಮಾರ್ ನಿಪಿ8 ರಲ್ಲಿ ಹೇಳಿರುವ ಕಂಪನಿಯಲ್ಲಿ 1 ½ ವರ್ಷಗಳಿಂದ ಕೆಲಸ ಮಾಡುತ್ತಿದ್ದ. ಮೃತ ಮನೋಜ್ ಕುಮಾರ್ ರವರು ನಿಪಿ8 ರಲ್ಲಿ ತೋರಿಸಿರುವ ಕಂಪನಿಯಲ್ಲಿ ನೇಮಕ ಆದ ಬಗ್ಗೆ ನೇಮಕದ ಆದೇಶದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ8 ರಲ್ಲಿ ತೋರಿಸಿರುವ ಕಂಪನಿಯಲ್ಲಿ ನನ್ನ ಮಗ ಕೆಲಸ ಮಾಡುತ್ತಿದ್ದರೆ ಆ ಕಂಪನಿ ವೇತನವನ್ನು ನನ್ನ ಮಗನ ಖಾತೆಗೆ ಪಾವತಿಸುತ್ತಿತ್ತು, ಆ ರೀತಿ ವೇತನವನ್ನು ಖಾತೆಗೆ ಪಾವತಿಸಿದ್ದರೆ ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ, ಆ ರೀತಿ ವೇತನವನ್ನು ಪಾವತಿಸದ ಕಾರಣ ನಾನು ಆ ಬ್ಯಾಂಕಿನ

ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಎಸ್.ಬಿ.ಐ ಬ್ಯಾಂಕಿನಲ್ಲಿ ನನ್ನ ಮಗ ಖಾತೆ ಹೊಂದಿದ್ದ ಆತನ ಖಾತೆಗೆ ಕಂಪನಿಯವರು ಹಣ ಹಾಕುತ್ತಿದ್ದರೋ ಇಲ್ಲವೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ಎಸ್.ಬಿ.ಐ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದ. ಆ ಖಾತೆಯ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿ8 ದಾಖಲೆಯಲ್ಲಿ ನನ್ನ ಮಗನ ಖಾತೆ ಐಸಿಐಸಿಐ ಬ್ಯಾಂಕ್ ಎಂದು ನಮೂದಾಗಿದೆ, ಖಾತೆಯ ಸಂಖ್ಯೆ ನಮೂದಾಗಿಲ್ಲ ಎಂದರೆ ಸರಿ.

3. ಒಬ್ಬ ವ್ಯಕ್ತಿ ಒಂದು ಕಂಪನಿಯಲ್ಲಿ ಕೆಲಸ ಮಾಡಬೇಕಾದರೆ ಆತನಿಗೆ ಪ್ರಾವಿಡೆಂಟ್ ಪಂಡ್ ಖಾತೆ ಸಂಖ್ಯೆಯನ್ನು ನೀಡಲಾಗಿರುತ್ತದೆ, ಆ ರೀತಿಯ ಯಾವುದೇ ಪ್ರಾವಿಡೆಂಟ್ ಪಂಡ್ ಖಾತೆಯ ಸಂಖ್ಯೆ ನಿಪಿ8 ರಲ್ಲಿ ಕಂಡು ಬರುತ್ತಿಲ್ಲ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಾವಿಡೆಂಟ್ ಪಂಡ್ ಸಂಖ್ಯೆಯ ಖಾತೆ ಇದ್ದರೆ ಕಂಪನಿಯವರು ಇಂತಿಷ್ಟು ಹಣವನ್ನು ಮತ್ತು ಉದ್ಯೋಗಿಯಿಂದ ಇಂತಿಷ್ಟು ಹಣವನ್ನು ಆ ಪ್ರಾವಿಡೆಂಟ್ ಖಾತೆಗೆ ಜಮೆ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಒಂದುವೇಳೆ ನನ್ನ ಮಗನಿಗೆ ಪ್ರಾವಿಡೆಂಟ್ ಪಂಡ್ ಖಾತೆಯ ಸಂಖ್ಯೆ ಇದ್ದಿದ್ದರೆ ಆ ಬಗ್ಗೆ ವಿವರ ನಿಪಿ8 ರಲ್ಲಿ ಕಂಡು ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.

4. ನಿಪಿ8 ರಲ್ಲಿ ನನ್ನ ಮಗ ದಿನಾಂಕಃ 27.05.2019 ರಂದು ಆ ಕಂಪನಿಗೆ ಸೇರಿದ್ದ ಎಂದು ಕಾಣಿಸಲಾಗಿದೆ ಎಂದರೆ ಸರಿ. ಹೆಚ್ಚಿನ ಪರಿಹಾರವನ್ನು ಪಡೆಯುವ

ಉದ್ದೇಶದಿಂದ ಅಸ್ತಿತ್ವದಲ್ಲಿ ಇಲ್ಲದ ಕಂಪನಿಗೆ ಸಂಬಂಧಿಸಿದ ನಿಪಿ8 ದಾಖಲೆಯನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಒಂದುವೇಳೆ ನನ್ನ ಮಗ ನಿಪಿ8 ರಲ್ಲಿ ತೋರಿಸಿರುವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ ಆತನ ನೇಮಕಾತಿ ಪತ್ರ, ಬ್ಯಾಂಕ್ ಪಾಸ್ ಪುಸ್ತಕ, ನೇಮಕಾತಿ ಪತ್ರದ ಜೊತೆ ನೀಡಿದ ವೇತನ ಪ್ರಮಾಣ ಪತ್ರವನ್ನು, ಆದಾಯ ತೆರಿಗೆ ಪಾವತಿಯ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇ ಎಂದರೆ ಮಗ ತೀರಿಕೊಂಡಿದ್ದಕ್ಕೆ ಆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

5. ನನ್ನ ಮಗನಿಗೆ ಅಫಘಾತದ ಸಮಯದಲ್ಲಿ 25 ವರ್ಷ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ:</u>

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.